ಉಪಾಧ್ಯಾಯರುಗಳ ಹುದ್ದೆಗಳು ಖಾಲಿ ಇವೆ. ಶಿಕ್ಷಕರ ಹಾಗೂ ಇತರೆ ಹುದ್ದೆಗಳಲ್ಲಿ ನಿವೃತ್ತಿ ಹೊಂದಿರುವವರು ಎಷ್ಟು ? ಇವುಗಳನ್ನು ಯಾವಾಗ ಹೇಗೆ ತುಂಬುತ್ತೀರಿ ?

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಮಿತಿಯೆಂದನ್ನು ರಚನೆ ಮಾಡಲಾಗಿದೆ. ಸಮಿತಿಗಳು ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರ ಆದೇಶ ನೀಡಿದೆ. ಆದಷ್ಟು ಬೇಗ ಶಿಕ್ಷಕರ ನೇಮಕವನ್ನು ಮಾಡಲಾಗುವುದು.

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೆ, ಸಮಿತಿಗಳನ್ನು ಯಾವ ಯಾವ ಜಿಲ್ಲೆಗಳಲ್ಲಿ ರಚನೆ ಮಾಡಲಾಗಿದೆ ? ಯಾವ ಯಾವ ಜಿಲ್ಲೆಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಿದ್ದೀರಿ? ೨೦-೫-೧೯೯೮ರಲ್ಲಿ ಆದೇಶವನ್ನು ಹೊರಡಿಸಿದ್ದೇವೆಂದು ಹೇಳಿದ್ದೀರಿ ? ಹಾಗಿದ್ದರೆ ಯಾವ ರೀತಿಯ ಆದೇಶವನ್ನು ಹೊರಡಿಸಿದ್ದೀರಿ ?

ಶ್ರೀ ಬಿ. ಸೋಮಶೇಖರ್.—ಸಮಿತಿಗಳನ್ನು ಎಲ್ಲಿ ಜಿಲ್ಲೆಗಳಲ್ಲಿ ರಚಿಸಲಾಗಿದೆ. ೨೦-೫-೧೯೯೮ರಲ್ಲಿ ಸಮಿತಿಗಳು ಕೆಲಸ ಮಾಡುವಂತೆ ಆದೇಶ ಹೊರಡಿಸಲಾಗಿದೆ. ಖಾಲಿ ಇರುವಕ್ಕ ಹುದ್ದೆಗಳನ್ನು ತುಂಬುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅನುಮತಿ ಕೊಟ್ಟಿದ್ದಾರೆ. ಒಂದು ತಿಂಗಳೊಳಗೆ ಸಂದರ್ಶನಕ್ಕೆ ಕರೆದು ಉಪಾಧ್ಯಾಯರ ನೇಮಕವನ್ನು ಮಾಡಲಾಗುವುದು.

ಶ್ರೀ ಕೆ. ವಸಂತ ಬಂಗೇರ.—ಅರ್ಜಿಗಳನ್ನು ಯಾವ ಯಾವ ಜಿಲ್ಲೆಗಳಲ್ಲಿ ಆಹ್ವಾನಿಸಿದ್ದೀರಿ ?

ಶ್ರೀ ಬಿ. ಸೋಮಶೇಖರ್.—ಈಗಾಗಲೇ ಪರಿಶೀಲನೆ ಮಾಡಲಾಗಿದೆ. ಸಂದರ್ಶನಕ್ಕೆ ಕರೆಯುವುದು ಬಾಕಿ ಇದೆ. ಒಂದು ತಿಂಗಳೊಳಗಾಗಿ ಸೂಕ್ತ ಅಭ್ಯರ್ಥಿಗಳನ್ನು ಸಮಿತಿಯವರು ಆಯ್ಕೆ ಮಾಡುತ್ತಾರೆ.

ಶ್ರೀ ಕೆ. ವಸಂತ ಬಂಗೇರ.—ರಾಜ್ಯದಲ್ಲಿ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ.

ಶ್ರೀ ಬಿ. ಸೋಮಶೇಖರ್.—ಅದರ ಬಗ್ಗೆ ತಮಗೆ ಸಂಖ್ಯೆಯನ್ನು ತರಿಸಿಕೊಡುತ್ತೇನೆ.

ಕೆ.ಆರ್.ಇ.ಸಿ. ಪ್ರೌಢಶಾಲೆ ಸುರತ್ಕಲ್

೧೭೬೬. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸುರತ್ಕಲ್ ಕೆ. ಆರ್. ಇ. ಸಿ. ಆವರಣದ ಪ್ರೌಢ ಶಾಲೆಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಶಿಕ್ಷಕರ ಸಂಖ್ಯೆ ಎಷ್ಟು ?

ಆ) ಈ ಶಾಲೆಯಲ್ಲಿರುವ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು ?

ಇ) ವಿದ್ಯಾರ್ಥಿಗಳಿಗೆ ಶಾಲಾ ಕೊಠಡಿಗಳಿಲ್ಲದೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ವಿದ್ಯಾರ್ಥಿಗಳ ಸಂಖ್ಯೆ ೨೫೩. ಶಿಕ್ಷಕರ ಸಂಖ್ಯೆ ೭ (ಮುಖ್ಯೋಪಾಧ್ಯಾಯರನ್ನು ಸೇರಿ)

ಆ) ೫

ಇ) ಸರ್ಕಾರದ ಗಮನಕ್ಕೆ ಬಂದಿದೆ.

ಈ) ಈ ಶಾಲೆಯು ಖಾಸಗಿ ಆಡಳಿತ ವರ್ಗಕ್ಕೆ ಸೇರಿರುವುದರಿಂದ ಸದರಿ ಶಾಲೆಯು ಆಡಳಿತ ವರ್ಗವೇ ಕೊಠಡಿಗಳನ್ನು ಕಟ್ಟಿಸಬೇಕಾಗಿರುತ್ತದೆ.

ಶ್ರೀ ಎನ್.ಎಂ ಅಡ್ಯಂತಾಯ.—ಈ ಶಾಲೆಯಲ್ಲಿ ಕೊಠಡಿಗಳ ಸಂಖ್ಯೆ ೫ ಎಂದು ಹೇಳಿದ್ದಾರೆ. ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ಈ ಶಾಲೆ ಇದೆ ಕಾಲೇಜಿನ ಪ್ರಿನ್ಸಿಪಾಲರು, ಮಾನ್ಯ ಕಾರ್ಯದರ್ಶಿಯವರಿಗೆ ೨೦-೧೨-೧೯೮೭ರಲ್ಲಿ ಪತ್ರವನ್ನು ಬರೆದು ಈ ಶಾಲೆಯನ್ನು ಕಾರ್ ಷೆಡ್ಡಿನಲ್ಲಿ ನಡೆಸುತ್ತಿದ್ದಾರೆಂದು ತಿಳಿಸಿದ್ದಾರೆ. ಹಾಗಿದ್ದರೆ ೫ ಕಾರು ಷೆಡ್‌ಗಳಲ್ಲಿ ಈ ಶಾಲೆಗಳನ್ನು ನಡೆಸುತ್ತಿದ್ದಾರೇಯೇ ? ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ, ಗಂಗರಾಂ ಕಟ್ಟಡದ ದುರಂತ ಆಗಲಿಕ್ಕೆ ಕಾರಣ ತಮಗೆ ಗೊತ್ತಿದ್ದು, ಇದನ್ನು ಸಹ ಹಾಗೇ ಬಿಡುತ್ತೀರಾ ? ಇದು ಬಾಸಗಿ ಆಡಳಿತ ವರ್ಗಕ್ಕೆ ಸೇರಿದೆಯೆಂದು ತಿಳಿಸಿದ್ದೀರಿ. ಮಾನ್ಯ ಪಂಚಾಯತ್ ಮಂತ್ರಿಯಾದ ಹೆಗಡೆಯವರು, ಈ ಒಂದು ಶಾಲೆಗೆ ಅಸ್ತಿಭಾರ ಶಿಲೆಯನ್ನು ಹಾಕಿದ್ದಾರೆ. ಇದು ಪತ್ರಿಕೆಗಳಲ್ಲಿ ಕೂಡ ಫೋಟೋ ಸಮೇತ ಬಂದಿದೆ.

> "The Hon'ble Chief Minister of Karnataka Sri Rama krishna Hegde laid the foundation stone to the proposed new building of the Kannada Medium High School on 23-12-1983 during his tour of Daksbina Kannada district and assured financial assistance to the building from the Government and when the papers pertaining to the sanction of the building was referred to the Chief Minister he is believed to have written on the said paper for the release of grants also. F rther it is said The vehicle shed is in a dilapidated condition on the one hand and it is congested and not congenial to run the high school"

ಇದಂ ಯಾರಿಂದ ಬಂದಿದೆ ಅಂದರೆ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಪ್ರಿನ್ಸಿಪಾಲ್‌ರವರಿಂದ ಬಂದಿದೆ. ಆದ್ದರಿಂದ ಈ ಪ್ರಶ್ನೆಗಳಿಗೆ ಉತ್ತರವನ್ನು ಮಾನ್ಯ ಮಂತ್ರಿಗಳಿಂದ ತಿಳಿಯಲಿಚ್ಛಿಸುತ್ತೇನೆ.

ಶ್ರೀ ಜೀವರಾಜ್ ಆಳ್ವ.—ಕೆ.ಆರ್.ಇ.ಸಿ.ಗೆ ನಾನೂ ಕೂಡ ಅಧ್ಯಕ್ಷನಾಗಿರುವುದರಿಂದ ನನಗೂ ಕೂಡ ಇದಂ ಗೊತ್ತಿದೆ. ಈ ದುಸ್ಥಿತಿಯ ಬಗ್ಗೆ ಗವರ್ನರ್ಸ್ ಬೋರ್ಡ್ ಮೀಟಿಂಗ್‌ನಲ್ಲಿ ಚರ್ಚೆಯಾಗಿದೆ. ಕಾಲೇಜ್ ಹಣದಲ್ಲೇ ಏನಾದರೂ ವ್ಯವಸ್ಥೆ ಮಾಡಿ ಕೇಂದ್ರ ಸರಕಾರದ ಒಪ್ಪಿಗೆಯನ್ನು ಪಡೆದು ಇದನ್ನು ಮಾಡಬೇಕೆನ್ನುವ ಯೋಜನೆ ಇದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ವಿದ್ಯಾ ಇಲಾಖೆಯಿಂದಲೂ ಸ್ವಲ್ಪ ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ವರ್ಷದ ಒಳಗೆ ಈ ಕಟ್ಟಡವನ್ನು ರಿಪೇರಿ ಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಶ್ರೀ ಎನ್. ಎಂ. ಅಡ್ಯಂತಾಯ.—ಕಾರ್ ಷೆಡ್ ಅನ್ನು ರಿಪೇರಿ ಮಾಡಿದರೆ ಎಷ್ಟು ಖರ್ಚು ಆಗುತ್ತದೆ ? ಇದು ಸರಿಯಾದ ಉತ್ತರವಲ್ಲ. ಈ ಸದನಕ್ಕೆ ಅಪಮಾನ. ಬೇರೆ ಕಡೆಯಲ್ಲಿ ಮಾನ್ಯ ಮುಖ್ಯ ಪಂಚಾಯತ್ ಮಂತ್ರಿಯವರು ಶಿಲಾನ್ಯಾಸ ಹಾಕಿದ್ದಾರೆ. ಇದನ್ನು ಕಾರ್ ಷೆಡ್‌ನಲ್ಲಿ ಮಾಡುತ್ತೀರಾ ? ದೇವರು ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ ಎನ್ನುವ ಹಾಗಾಗುತ್ತದೆ. ಮುಖ್ಯ ಮಂತ್ರಿಗಳು ಒಪ್ಪಿಗೆ ಕೊಟ್ಟಿದ್ದಾರೆ ನೀವು ಕೊಡುವುದಿಲ್ಲವೆಂದು ಹೇಳಿದರೆ ಹೇಗೆ ? ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ಅವರೇ ಉತ್ತರ ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಆದಷ್ಟು ಬೇಗ ಮಾಡಿಸಿ ಕೊಡುತ್ತೇನೆ.

ನವಲಗುಂದದಿಂದ ಬಲ್ಲರವಾಡ ಗ್ರಾಮಕ್ಕೆ ಹೋಗುವ ರಸ್ತೆಗಳ ದುರಸ್ತಿ ಮಾಡದಿರುವುದು.

೧೨೫೫. ಶ್ರೀ ಗೋಪಾಲ ಮಂಕ್ಕಿಂದ ಕಾನಡೆ (ಸಿರ್ಸಿ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಯ ನವಲಗುಂದದಿಂದ ಬಲ್ಲರವಾಡ ಗ್ರಾಮಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳು ಓಡಾಡಲು ರಸ್ತೆಯ ಸಾದುರಸ್ತಿಯಿಂದಾಗಿ ತೊಂದರೆ ಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.